ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ:ಎಚ್‌ಡಿಎಸ್‌ಸಿಎಲ್/ಪತ್ರಿಕಾಮಾಹಿತಿ/2019-20 ದಿ: 13-02-2020

## ಪತ್ರಿಕಾ ಮಾಹಿತಿ

**ವಿಷಯ :** ನಗರ ಪ್ರದೇಶದ ನಾಗರೀಕ ಸೌಲಭ್ಯಗಳ ಕುರಿತು ಸಮೀಕ್ಷಣೆಯಲ್ಲಿ ಇದುವರೆಗೆ ಸಾಧಿಸಿದ ವರದಿ

* * * * *

ಕೇಂದ್ರ ನಗರಾಭಿವೃದ್ಧಿ ಮಂತ್ರಾಲಯದಿಂದ ನಗರ ಪ್ರದೇಶದಲ್ಲಿ ವಾಸಿಸುವ ಜನರಿಗೆ ನಾಗರೀಕ ಸೌಲಭ್ಯಗಳು ಹಾಗೂ ನಗರ ಪ್ರದೇಶದಲ್ಲಿ ಜೀವನದ ಕ್ಷಮತೆಯ ಕುರಿತು ದಿ: 01-02-2020 ರಿಂದ 29-02-2020 ರ ವರೆಗೆ ನಾಗರೀಕರ ಸಮೀಕ್ಷಣಾ ಅಭಿಯಾನವನ್ನು ಸ್ಮಾರ್ಟಸಿಟಿ ಸಂಸ್ಥೆಯಿಂದ ಪ್ರಾರಂಬಿಸಿದೆ. ಅದರ ಅಂಗವಾಗಿ ಅವಳಿನಗರದ ಪ್ರಮುಖ ಪ್ರದೇಶಗಳಲ್ಲಿ ನಾಗರೀಕರು ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಆಗಲು ಜಾಹಿರಾತು ಪ್ರಸಿದ್ದಿಪಡಿಸಲಾಗಿದೆ. ಅದರನ್ವಯ ಈಗಾಗಲೇ

1. ಐಬಿಎಮ್‌ಆರ್ (IBMR) ಕ್ಯಾಲೇಜ್, ಅಕ್ಷಯ ಕಾಲೋನಿ ವಿದ್ಯಾನಗರ ಹುಬ್ಬಳ್ಳಿಯಲ್ಲಿ ಎಮ್.ಬಿ.ಎ. ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅವರ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ. ಪೋಟೋ ಪ್ರತಿಯನ್ನು ಲಗತ್ತಿಸಿದೆ.
2. ಪ್ರತಿ ವಲಯ ಕಚೇರಿಯ ವ್ಯಾಪ್ತಿಯಲ್ಲಿ ಮತ್ತು ವಾರ್ಡ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್‌ಗಳನ್ನು ಧ್ವನಿವರ್ಧಕ ಮೂಲಕ ನುಡಿಸಿ ನಾಗರೀಕರು ಪಾಲ್ಗೊಳ್ಳುವಂತೆ ಮಾಡಲಾಗುತ್ತಿದೆ. (ಧ್ವನಿ ಮುದ್ರಣ ಕಳುಹಿಸಲಾಗಿದೆ)
3. ನಗರದ ಪ್ರತಿಷ್ಠಿತ ಹೊಟೆಲ್‌ಗಳಲ್ಲಿ ವ್ಯಾಪಾರಸ್ಥರ ಮತ್ತು ಸಣ್ಣ ಕೈಗಾರಿಕೋದ್ಯಮಿಗಳ ಸಭೆಯಲ್ಲಿ ಸದರಿ ಸಮೀಕ್ಷಣೆಯ ಕುರಿತು ಮಾಹಿತಿ ನೀಡಿ ಆನ್‌ಲೈನ್ ಮೂಲಕ ನಗರ ಸೇವೆಗಳ ಮಾಪನವನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಸದರಿ ಚಟುವಟಿಕೆಯ ಕುರಿತು ಪೋಟೋ ಪ್ರತಿಗಳನ್ನು ಲಗತ್ತಿಸಿದೆ.
4. ನಗರದ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ನಗರ ಸೇವೆಗಳ ಮಾಪನವನ್ನು ತಂದೆ ತಾಯಿ ಹಾಗೂ ಬಂಧುಗಳಿಂದ ಆನ್‌ಲೈನ್ ಮೂಲಕ ದಾಖಲಿಸಿ ತರುವಂತೆ ಗಮನ ಸೆಳೆಯಲಾಗಿದೆ. ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಅವರ ತಂದೆ-ತಾಯಿಯಿಂದ ರಾತ್ರಿ ಊಟದ ಸಮಯದ ನಂತರ ಹತ್ತು ನಿಮಿಷಗಳ ಅವಧಿಯಲ್ಲಿ ಆನ್‌ಲೈನ್ ಮೂಲಕ ನಗರ ಸೇವೆಯ ಮಾಪನವನ್ನು ದಾಖಲಿಸಿ ಮರುದಿನ ಶಿಕ್ಷಣ ಸಂಸ್ಥೆಯಲ್ಲಿ ಮಾಹಿತಿಯನ್ನು ಒದಗಿಸುವುದು. ಈ ಹತ್ತು ನಿಮಿಷಗಳ ಅವಧಿಯ ಕಾರ್ಯವನ್ನು ಹೋಂ ವರ್ಕ ಆಗಿ ನೀಡಲಾಗಿದೆ.

ಇಲ್ಲಿಯವರೆಗೆ ನಗರ ಸಮೀಕ್ಷಣೆಯಲ್ಲಿ 4155 ನಾಗರೀಕರು ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ದಾಖಲಿಸಿ ಹುಬ್ಬಳ್ಳಿ-ಧಾರವಾಡ ಅವಳಿನಗರವು ರಾಜ್ಯದ ಸ್ಮಾರ್ಟಸಿಟಿ ನಗರಗಳಲ್ಲಿ ಬೆಂಗಳೂರು ನಂತರದ 2ನೇಯ ಸ್ಥಾನದಲ್ಲಿ ಅತೀ ಹೆಚ್ಚು ನಾಗರೀಕರು ಪಾಲ್ಗೊಂಡ ನಗರವಾಗಿರುವುದು. ಈಗಾಗಲೇ ಬೆಂಗಳೂರು ನಗರದಲ್ಲಿ 4480 ನಾಗರೀಕರು ತಮ್ಮ ಅಭಿಪ್ರಾಯಗಳನ್ನು ದಾಖಲಿಸಿರುವರು. ಸದರಿ ಸಮೀಕ್ಷಣೆಯು ಪ್ರಸ್ತುತ ತಿಂಗಳ 29-02-2020 ರ ವರೆಗೆ ಜರುಗುವುದು. ಸ್ಮಾರ್ಟಸಿಟಿ ಸಂಸ್ಥೆಯು ಎಲ್ಲ ವರ್ಗದ ನಾಗರೀಕರು ಪಾಲ್ಗೊಳ್ಳುವಂತೆ ಆಗಲು ಸಾಮೂಹಿಕ ನಗರ ಮಾಪನದಲ್ಲಿ ದಾಖಲಿಸುವಂತೆ ವ್ಯಾಪಕವಾಗಿ ಕ್ರಮ ತೆಗೆದುಕೊಳ್ಳಲಾಗಿದೆ.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿಗಳು
ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್,
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :**
**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ. ಕಾಲೇಜು ಆವರಣ ವಿದ್ಯಾನಗರ, ಹುಬ್ಬಳ್ಳಿ



Scanned by CamScanner